

بسم اللهِ الرّحمٰنِ الرّحيم

# ಪ್ರವಾದಿ ಚರಿತ್ರೆ – ಪೈಗಂಬರ್(ಸ)ರ ಕಾಲದ ವಿವಿಧ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **27–12–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಇಂದು ಸಹ ಕೆಲವು ಯುದ್ಧ ಕಾರ್ಯಾಚರಣೆಗಳ ಬಗ್ಗೆ ಪ್ರಸ್ತಾಪಿಸುತ್ತೇನೆ. ಸರಿಯ್ಯ ಝೈದ್ ಬಿನ್ ಹಾರಿಸರ ಹೆಸರಿನಲ್ಲಿ ಒಂದು ಕಾರ್ಯಾಚರಣೆಯ ಪ್ರಸ್ತಾಪ ಚರಿತ್ರೆಯಲ್ಲಿದೆ. ಈ ಕಾರ್ಯಾಚರಣೆ ಹಿಜರೀ 6, ಜಮಾದಿಯುಲ್ ಆಖಿರ್ ಮಾಸದಲ್ಲಿ ಜಝ್ಝಾಮಿನ ಒಂದು ಪಟ್ಟಣವಾದ ಹಸ್‌ಮಾದಲ್ಲಿ ನಡೆದಿತ್ತು. ಅದು ಮದೀನದಿಂದ ಎಂಟು ದಿನಗಳ ಯಾತ್ರೆ ಮಾಡುವ ದೂರದಲ್ಲಿತ್ತು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್[(ರ)] ಹೇಳುತ್ತಾರೆ: ಈ ಸರಿಯ್ಯದ ದಿನಾಂಕದ ಬಗ್ಗೆ ಒಂದು ಸಂದೇಹವಿದೆ. ಅದನ್ನು ಪ್ರಸ್ತಾಪಿಸುವುದು ಮುಖ್ಯ. ಇಬ್ನು ಸಅದ್ ಮತ್ತು ಅವರನ್ನು ಅನುಸರಿಸುತ್ತಾ ಇತರ ಕೆಲವು ಚರಿತ್ರೆಗಾರರು ಈ ಸರಿಯ್ಯದ ದಿನಾಂಕ ಹಿಜರೀ 6, ಜಮಾದಿಯುಲ್ ಆಖಿರ್ ಎಂದು ಬರೆದಿರುವರು. ಆದರೆ ಈ ಸರಿಯ್ಯ ಹಿಜರೀ ಏಳರಲ್ಲಿ, ಹುದೈಬಿಯಾ ಸಂಧಿಯ ನಂತರ ನಡೆದಿತ್ತು ಎಂದು ಅಲ್ಲಾಮ ಇಬ್ನು ಖಯ್ಯಿಮ್ ಝಾದುಲ್ ಮಆದ್‌ನಲ್ಲಿ ಹೇಳಿರುವರು. ನನ್ನ ಅಭಿಪ್ರಾಯದಲ್ಲಿ ಒಂದು ವಿಷಯವನ್ನು ಅಲ್ಲಾಮ ಇಬ್ನು ಖಯ್ಯಿಮ್ ಕಡೆಗಣಿಸಿರುವರು. ಅದೇನೆಂದರೆ, ಇರಾನಿನ ಅರಸನನ್ನು ಭೇಟಿಯಾಗಲು ಸಿರಿಯಾಗೆ ದಿಹ್‌ಯ ಎರಡು ಬಾರಿ ಹೋಗಿರುವ ಸಾಧ್ಯತೆಯಿದೆ. ಮೊದಲ ಬಾರಿಗೆ ಹುದೈಬಿಯಾ ಸಂಧಿಗೆ ಮುಂಚೆ ವ್ಯಾಪಾರಕ್ಕಾಗಿ ಸ್ವತಃ ಹೋಗಿರಬಹುದು ಮತ್ತು ಅರಸನನ್ನು ಭೇಟಿಯಾಗಿರಬಹುದು. ಎರಡನೇ ಬಾರಿ ಹುದೈಬಿಯಾ ಸಂಧಿಯ ನಂತರ ಹಝ್ರತ್ ಪೈಗಂಬರ್[(ಸ)]ರ ಪತ್ರವನ್ನು ತೆಗೆದುಕೊಂಡು ಹೋಗಿರಬಹುದು. ಈ ಯಾತ್ರೆಯಲ್ಲಿ ದಿಹ್‌ಯನ ಬಳಿ ವ್ಯಾಪಾರ ಸಾಮಾನುಗಳಿತ್ತು ಎಂದು ಇಬ್ನು ಇಸ್‌ಹಾಖ್ ಹೇಳಿರುವುದು ಈ ವಾದಕ್ಕೆ ಪುಷ್ಠಿ ನೀಡುತ್ತದೆ. ಹುದೈಬಿಯ ಸಂಧಿಯ ನಂತರದ ಯಾತ್ರೆಯಲ್ಲಿ ವ್ಯಾಪಾರ ಸಾಮಾನುಗಳು ಇದ್ದದ್ದಾಗಿ ಯಾವುದೇ ಪ್ರಸ್ತಾಪವಿಲ್ಲ. ದಹ್‌ಯನ ಈ ಯಾತ್ರೆ ವ್ಯಾಪಾರ ಉದ್ದೇಶಕ್ಕಾಗಿ ಆಗಿರಬಹುದು ಮತ್ತು ಇಬ್ನು ಸಅ್‌ದ್‌ರ ವರದಿಗಾರ ದಹ್‌ಯರ ಎರಡನೇ ಯಾತ್ರೆಯನ್ನು ಈ ಯಾತ್ರೆಯೊಂದಿಗೆ ಜೋಡಿಸಿ ಅರಸನ ಭೇಟಿಯನ್ನು ಎರಡೂ ಒಂದೇ ಎಂದು ಅನುಮಾನಿಸಿರಬಹುದು. ಅಲ್ಲಾಹನೇ ಬಲ್ಲನು.

ಅದರ ನಂತರ ಅಬ್ದುರ್ರಹ್ಮಾನ್ ಬಿನ್ ಔಫ್[(ರ)]ರ ಕಾರ್ಯಾಚರಣೆಯ ಪ್ರಸ್ತಾಪವಿದೆ. ಈ ಕಾರ್ಯಾಚರಣೆ ಹಿಜರೀ 6, ಶಅ್‌ಬಾನ್ ತಿಂಗಳಲ್ಲಿ ದೂಮತುಲ್ ಜಂದಲ್ ಕಡೆಗೆ ಆಗಿತ್ತು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರು ಇದನ್ನು ಹೀಗೆ ವಿವರಿಸಿರುವರು: ಈ ಸರಿಯ್ಯದ ತಯಾರಿ ಮತ್ತು ಹೊರಡುವಿಕೆಯ ಕುರಿತು ಅಬ್ದುಲ್ಲಾಹ್ ಬಿನ್ ಉಮರ್[(ರ)]ರಿಂದ ಇಬ್ನು ಇಸ್‌ಹಾಖ್ ಒಂದು ಸ್ವಾರಸ್ಯಕರ ಘಟನೆಯನ್ನು ವರದಿ ಮಾಡಿರುವರು. ಅಬ್ದುಲ್ಲಾಹ್ ಬಿನ್ ಉಮರ್[(ರ)] ಹೇಳುತ್ತಾರೆ: ಒಮ್ಮೆ ನಾವೆಲ್ಲರೂ ಹಝ್ರತ್ ಪೈಗಂಬರ್[(ಸ)]ರ ಸನ್ನಿಧಿಯಲ್ಲಿ ಕುಳಿತುಕೊಂಡಿದ್ದೆವು. ಸಭೆಯಲ್ಲಿ ಹಝ್ರತ್ ಅಬೂಬಕರ್[(ರ)], ಉಮರ್[(ರ)], ಉಸ್ಮಾನ್[(ರ)], ಅಲಿ[(ರ)] ಮತ್ತು ಅಬ್ದುರ್ರಹ್ಮಾನ್ ಬಿನ್ ಔಫ್[(ರ)] ಸಹ ಇದ್ದರು. ಆಗ ಒಬ್ಬ ಅನ್ಸಾರಿ ಯುವಕ ಬಂದು ಹಝ್ರತ್ ಪೈಗಂಬರ್[(ಸ)]ರೊಡನೆ ಹೀಗೆ ಕೇಳಿದ: ಯಾ ರಸೂಲಲ್ಲಾಹ್, ಸತ್ಯವಿಶ್ವಾಸಿಗಳಲ್ಲಿ ಅತ್ಯಂತ ಶ್ರೇಷ್ಠರು ಯಾರು? ತನ್ನ ಸ್ವಭಾವದಲ್ಲಿ ಅತ್ಯಂತ ಶ್ರೇಷ್ಠನಾದವನೇ ಅತ್ಯಂತ ಶ್ರೇಷ್ಠ ಎಂದು ಹಝ್ರತ್ ಪೈಗಂಬರ್[(ಸ)] ಉತ್ತರಿಸಿದರು. ಆತನು ಕೇಳಿದನು: ಯಾ ರಸೂಲಲ್ಲಾಹ್, ಅತ್ಯಂತ ಮುತ್ತಖೀ ಯಾರು? ಹಝ್ರತ್ ಪೈಗಂಬರ್[(ಸ)] ಹೀಗೆ ಉತ್ತರಿಸಿದರು: ಮರಣವನ್ನು ಹೆಚ್ಚಾಗಿ ನೆನಪಿಸುವವನು ಮತ್ತು ಅದಕ್ಕಾಗಿ ಸಮಯಕ್ಕೆ ಮುಂಚಿತವಾಗಿ ತಯಾರಿ ಮಾಡುವವನು.

(ಹುಝೂರ್ ಹೇಳಿದರು:) ಅಲ್ಲಾಹನ ಭಯವಿರಿಸಿಕೊಳ್ಳುವುದು, ಅವನಿಗೆ ಸಲ್ಲಬೇಕಾದ ಕರ್ತವ್ಯವನ್ನು ನಿರ್ವಹಿಸುವುದು, ಅವನ ಆದೇಶಗಳನ್ನು ಪಾಲಿಸುವುದೇ ಮರಣದ ತಯಾರಿಯಾಗಿದೆ.

ಆಗ ಆ ಅನ್ಸಾರಿ ಯುವಕ ಸುಮ್ಮನಾದನು. ಹಝ್ರತ್ ಪೈಗಂಬರ್[(ಸ)] ನಮ್ಮೆಡೆಗೆ ನೋಡಿಕೊಂಡು ಹೀಗೆ ಹೇಳಿದರು: ಎಲೈ ಮುಹಾಜಿರರ ಸಮೂಹವೇ, ಐದು ಕೆಡುಕುಗಳು ಎಂತಹದ್ದು ಎಂದರೆ, ಅವು ನನ್ನ ಸಮುದಾಯದಲ್ಲಿ ಉಂಟಾಗದಿರಲು ನಾನು ಅಲ್ಲಾಹನ ಅಭಯವನ್ನು ಯಾಚಿಸುತ್ತೇನೆ. ಏಕೆಂದರೆ ಅವು ಸಮುದಾಯವನ್ನು ನಾಶಮಾಡುತ್ತವೆ.

ಒಂದು, ಯಾವುದೇ ಸಮುದಾಯದಲ್ಲಿ ಅಶ್ಲೀಲ ಕೃತ್ಯಗಳು ಮಿತಿಮೀರಿ ಅವುಗಳನ್ನು ಬಹಿರಂಗವಾಗಿ ಮಾಡಲು ತೊಡಗಿಕೊಂಡರೆ ಅದರ ಕಾರಣದಿಂದ ಹಿಂದಿನ ಜನರಲ್ಲಿ ಇರದಿದ್ದ ಕಾಯಿಲೆಗಳು ಮತ್ತು ಸಾಂಕ್ರಾಮಿಕ ರೋಗಗಳು ಉಂಟಾಗಲು ತೊಡಗುವುದು. ಅಂತಹ ಸಮುದಾಯ ನಾಶವಾಗದೇ ಇರದು. (ಹುಝೂರ್ ಹೇಳಿದರು:) ಇಂದು ಲೋಕದಲ್ಲಿ ಇದು ಸರ್ವ ಸಾಧಾರಣವಾಗಿ ಕಾಣಬಹುದಾಗಿದೆ. ಹಝ್ರತ್ ಪೈಗಂಬರ್[(ಸ)] ಇದರಿಂದ ಅಭಯ ಯಾಚಿಸಿದ್ದರು. ಮುಸ್ಲಿಮರು ಇದರ ಬಗ್ಗೆ ವಿಶೇಷ ಗಮನಹರಿಸಬೇಕಾಗಿದೆ.

ಎರಡು, ಯಾವುದೇ ಸಮುದಾಯದಲ್ಲಿ ಅಳತೆ ಮತ್ತು ತೂಕದಲ್ಲಿ ಮೋಸಗಾರಿಕೆ ಮಾಡುವ ಕೆಡುಕು ಉಂಟಾದರೆ ಅಂತಹ ಸಮುದಾಯದಲ್ಲಿ ಬರಗಾಲ, ಅತಿಯಾದ ಕಷ್ಟತೆ ಮತ್ತು

ಅಧಿಕಾರಿಯ ದೌರ್ಜನ್ಯದ ವಿಪತ್ತು ಬಂದರೆಗದೇ ಇರಲು ಸಾಧ್ಯವಲ್ಲ. (ಹುಝೂರ್ ಹೇಳಿದರು:) ಇದರ ಬಗ್ಗೆಯೂ ಬಹಳ ಗಮನಹರಿಸಬೇಕಾಗಿದೆ. ಮುಸ್ಲಿಮರಲ್ಲೂ ಬಹಳ ಹೆಚ್ಚಾಗಿ ಮೋಸಗಾರಿಕೆ ಉಂಟಾಗಿದೆ. ಅವರು ಇದನ್ನು ತಿಳಿದುಕೊಂಡರೆ ಎಷ್ಟು ಚೆನ್ನಾಗಿತ್ತು. ಅಹ್ಮದಿಯರು ಕೂಡ ವಿಶೇಷವಾಗಿ ಈ ಬಗ್ಗೆ ಗಮನಹರಿಸಬೇಕಾಗಿದೆ.

ಮೂರು, ಯಾವುದಾದರೂ ಸಮುದಾಯದಲ್ಲಿ ಝಕಾತ್ ಮತ್ತು ದಾನಧರ್ಮಗಳನ್ನು ಮಾಡುವುದರಲ್ಲಿ ಆಲಸ್ಯ ಮತ್ತು ಅಸಡ್ಡೆ ಉಂಟಾದರೆ ಅಂತಹ ಸಮುದಾಯದಲ್ಲಿ ಮಳೆಯ ಕೊರತೆ ಉಂಟಾಗದೇ ಇರದು. ಎಲ್ಲಿಯ ವರೆಗೆ ಎಂದರೆ, ಅಲ್ಲಾಹನಿಗೆ ತಾನು ಸೃಷ್ಟಿಸಿದ ಜಾನುವಾರುಗಳು ಬಗ್ಗೆ ಚಿಂತೆ ಇಲ್ಲದೆ ಇರುತ್ತಿದ್ದರೆ ಅಂತಹ ಸಮುದಾಯದಲ್ಲಿ ಮಳೆ ಬರುವುದು ಪೂರ್ಣವಾಗಿಯೂ ಸ್ಥಗಿತಗೊಳ್ಳುವುದು. (ಹುಝೂರ್ ಹೇಳಿದರು:) ಇದು ಕೂಡ ಅಲ್ಲಾಹನ ಶಿಕ್ಷೆಯ ಕುರುಹು ಆಗಿದೆ. ಇದರಿಂದಲೂ ಅಭಯ ಯಾಚಿಸಬೇಕು. ನೀವು ಅಭಯ ಯಾಚಿಸಿರಿ, ನಾನು ಸಹ ಅಭಯ ಯಾಚಿಸುತ್ತೇನೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿರುವರು.

ನಾಲ್ಕು, ಯಾವುದಾದರೂ ಸಮುದಾಯ ಅಲ್ಲಾಹನು ಮತ್ತು ಅವನ ಪ್ರವಾದಿಯೊಂದಿಗೆ ಮಾಡಿರುವ ಪ್ರತಿಜ್ಞೆಯನ್ನು ಮುರಿದರೆ ಅಂತಹ ಸಮುದಾಯದ ಮೇಲೆ ಅವರ ಶತ್ರುಗಳಾದ ಅನ್ಯ ಸಮುದಾಯದವರು ಆಳ್ವಿಕೆ ಮಾಡುವರು ಮತ್ತು ಅವರ ಹಕ್ಕುಗಳನ್ನು ಕಸಿದುಕೊಳ್ಳುವರು. (ಹುಝೂರ್ ಹೇಳಿದರು:) ಇಂದಿನ ಮುಸ್ಲಿಮರ ಅವಸ್ಥೆಯಿಂದ ಗೊತ್ತಾಗುವುದೇನೆಂದರೆ, ಅವರು ತನ್ನ ಪ್ರತಿಜ್ಞೆಯನ್ನು ಮುರಿದಿರುವರು ಎಂದಾಗಿದೆ. ಅಲ್ಲಾಹನು ಕೃಪೆದೋರಲಿ ಮತ್ತು ಅವರಿಗೆ ವಿವೇಕ ನೀಡಲಿ.

ಐದು, ಎಂದಾದರೂ ಯಾವುದೇ ಸಮುದಾಯದ ಪಂಡಿತರು ಮತ್ತು ನೇತಾರರು ಶರೀಅತಿನ ವಿರುದ್ಧವಾದ ತೀರ್ಪುಗಳನ್ನು ನೀಡಿಕೊಂಡು ಶರೀಅತನ್ನು ತಮ್ಮ ಇಷ್ಟಾನುಸಾರ ಬದಲಾಯಿಸಿದರೆ ಅಂತಹ ಸಮುದಾಯದ ಒಳಗೆ ಜಗಳ ಮತ್ತು ಬಿರುಕಿನ ಪರಂಪರೆ ಆರಂಭವಾಗುವುದು. (ಹುಝೂರ್ ಹೇಳಿದರು:) ಈಗ ಮುಸ್ಲಿಮರಲ್ಲಿ ಪಕ್ಷಗಾರಿಕೆ ಸರ್ವಸಾಧಾರಣವಾಗಿ ಕಂಡುಬರುತ್ತಿದೆ. ಯಾವ ಸಂಗತಿಗಳಿಂದ ಹಝ್ರತ್ ಪೈಗಂಬರ್(ಸ) ಅಭಯ ಯಾಚಿಸಿದ್ದರೋ ಅದೇ ಇಂದು ಮುಸ್ಲಿಮರಲ್ಲಿ ನಾವು ಕಾಣುತ್ತಿದ್ದೇವೆ. ಅಲ್ಲಾಹನು ಕೃಪೆದೋರಲಿ. ಹಝ್ರತ್ ಪೈಗಂಬರ್(ಸ)ರ ಈ ಸುವರ್ಣ ಮಾತುಗಳು ಸಮುದಾಯಗಳ ಅಭಿವೃದ್ಧಿ ಮತ್ತು ಅವನತಿಯ ಕಾರಣಗಳ ಅತ್ಯುತ್ತಮ ವಿವರಣೆಯಾಗಿದೆ. ಇಂದು ಮುಸ್ಲಿಮರು ಬಯಸುವುದಾದರೆ ಅವರಿಗೆ ಈಗಿನ ಕಾಲದಲ್ಲೂ ಈ ಮಾತುಗಳು ಅತ್ಯುತ್ತಮ ಪಾಠವಾಗಿದೆ. ಮುಸ್ಲಿಮರು ಇದರ ಬಗ್ಗೆ ಚಿಂತಿಸಿದ್ದರೆ ಎಷ್ಟು ಚೆನ್ನಾಗಿತ್ತು!

ಅನಂತರ ಸರಿಯ್ಯ ಹಝ್ರತ್ ಅಲಿ ಬಿನ್ ಅಬೀ ತಾಲಿಬ್(ರ) ಆಗಿದೆ. ಈ ಕಾರ್ಯಾಚರಣೆ ಫಿದಕಿನ ಕಡೆಗೆ ಆಗಿತ್ತು. ಈ ಸರಿಯ್ಯ ಹಿಜರೀ 6, ಶುಅಬಾನ್ ಮಾಸದಲ್ಲಿ ನಡೆದಿತ್ತು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ)ರನ್ನು ನೂರು ಜನರೊಂದಿಗೆ ಫಿದಕಿಗೆ ಬನೂ ಸಅದ್ ಬಿನ್ ಬಕರ್ ಗೋತ್ರದ ಕಡೆಗೆ ಕಳುಹಿಸಿದರು. ಹಿಜರೀ 7, ಖೈಬರ್ ಯುದ್ಧದ ವೇಳೆ ಈ ಪ್ರದೇಶವನ್ನು ಯುದ್ಧ ಮಾಡದೇ ಜಯಿಸಲಾಗಿತ್ತು.

ಅನಂತರ ಸರಿಯ್ಯ ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪವಿದೆ. ಅದು ಬನೂ ಫಝ್ಝಾರ ಗೋತ್ರದ ಕಡೆಗೆ ಆಗಿತ್ತು. ಈ ಸರಿಯ್ಯ ಹಿಜರೀ 6ರಲ್ಲಿ ನಡೆದಿತ್ತು. ಬನೂ ಫಝ್ಝಾರ ಗೋತ್ರವು ನಜದಿನಲ್ಲಿ ಅಲ್‌ಖಿರಾ ಕಣಿವೆಯಲ್ಲಿ ನೆಲೆಸಿತ್ತು. ಈ ಯುದ್ಧ ತುಕಡಿಯನ್ನು ಹಝ್ರತ್ ಝೈದ್ ಬಿನ್ ಹಾರಿಸ(ರ)ರ ನಾಯಕತ್ವದಲ್ಲಿ ಕಳುಹಿಸಲಾಗಿತ್ತು ಎಂದು **ಅಲ್‌ತಬಖಾತುಲ್ ಖುಬ್ರಾ** ಮತ್ತು **ಸೀರತ್ ಇಬ್ನು ಹಿಶಾಮ್**‌ನಲ್ಲಿ ಬರೆಯಲಾಗಿದೆ. ಆದರೆ **ಸಹೀಹ್ ಮುಸ್ಲಿಮ್** ಮತ್ತು **ಸುನನ್ ಅಬೀ ದಾಊದ್**‌ನಿಂದ ಗೊತ್ತಾಗುವುದೇನೆಂದರೆ, ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರನ್ನು ಈ ಕಾರ್ಯಾಚರಣೆಯ ಅಮೀರ್ ಆಗಿ ನೇಮಿಸಿದ್ದರು ಎಂದಾಗಿದೆ. ಈ ಯುದ್ಧದಲ್ಲಿ ಮುಸ್ಲಿಮರ ಘೋಷಣೆ **ಅಮಿತ್ ಅಮಿತ್** ಎಂದಾಗಿತ್ತು. ಹಝ್ರತ್ ಸಲ್ಮ ಬಿನ್ ಅಕೂಅ್ ಹೇಳುತ್ತಾರೆ: ನಾನು ಅಂದು ನನ್ನ ಕೈಯಿಂದ ಏಳು ಜನರನ್ನು ವಧಿಸಿದ್ದೆ. ಮತ್ತೊಂದು ವರದಿಯ ಪ್ರಕಾರ ಒಂಬತ್ತು ಎಂದೂ ಇದೆ.

(ಖುತ್‌ಬದ ಕೊನೆಯಲ್ಲಿ ಹುಝೂರ್ ಮೂವರು ದಿವಂಗತರ ಕುರಿತು ವಿಶದವಾಗಿ ಹೇಳಿದರು. ಅವರಲ್ಲಿ ಮೊದಲ ಪ್ರಸ್ತಾಪ ಖಾದಿಯಾನಿನ ದರ್‌ವೇಶ್ ಆಗಿದ್ದ ಸನ್ಮಾನ್ಯ ತಯ್ಯಿಬ್ ಅಹ್ಮದ್ ಬಂಗಾಳಿ ಸಾಹಿಬ್‌ರದ್ದಾಗಿತ್ತು.) ದಿವಂಗತರು ಡಿಸೆಂಬರ್ 11ರಂದು ತೊಂಬತ್ತೇಳನೇ ವಯಸ್ಸಿನಲ್ಲಿ ನಿಧನಗೊಂಡರು – **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಜನನ ಬಂಗ್ಲಾದೇಶದಲ್ಲಿ ಆಗಿತ್ತು. 1942ರಲ್ಲಿ ಅವರಿಗೆ ಡಾಕದಲ್ಲಿ ಬೈಅತ್ ಫಾರಮ್ ಭರ್ತಿ ಮಾಡಿಕೊಂಡು ಅಹ್ಮದಿಯ್ಯತ್ತಿನಲ್ಲಿ ಪ್ರವೇಶಿಸಲು ಸೌಭಾಗ್ಯ ಲಭಿಸಿತ್ತು. 1945ರಲ್ಲಿ ಮೊದಲ ಬಾರಿ ಖಾದಿಯಾನಿನ ಜಲ್ಸ ಸಾಲಾನದಲ್ಲಿ ಭಾಗವಹಿಸಿದರು ಮತ್ತು ಅವರಿಗೆ ಹಝ್ರತ್ ಮುಸ್ಲಿಹ್ ಮೌಊದ್(ರ)ರನ್ನು ಭೇಟಿಯಾಗುವ ಸೌಭಾಗ್ಯ ಲಭಿಸಿತು. ಖಾದಿಯಾನಿನೊಂದಿಗೆ ಅವರ ಹೃದಯದಲ್ಲಿ ಎಷ್ಟು ಪ್ರೀತಿ ಉಂಟಾಗಿತ್ತು ಎಂದರೆ ಅನಂತರ ತನ್ನ ಸ್ವದೇಶಕ್ಕೆ ಅವರು ಮರಳಿ ಹೋಗಲಿಲ್ಲ. ಗ್ರಾಮೀಣ ಮುಬಲ್ಲಿಗರಿಗಾಗಿ ಇರುವ ವಿಶೇಷ ಕ್ಲಾಸಿನಲ್ಲಿ ಅವರು ಎರಡು ವರ್ಷ ಕಲಿತರು. ಈ ನಡುವೆ 1947ರಲ್ಲಿ ಭಾರತ ವಿಭಜನೆಯ ಘಟನೆ ನಡೆಯಿತು. ಆಗ ಖಾದಿಯಾನಿನಲ್ಲೇ ನೆಲೆಸಬೇಕು ಎಂಬ ಅವರ ಅರ್ಜಿಯನ್ನು ಮಂಜೂರು ಮಾಡಲಾಯಿತು. ದರ್‌ವೇಶಿನ ಕಾಲದಲ್ಲಿ ಅನೇಕ ಸ್ಥಳಗಳಲ್ಲಿ ಭದ್ರತೆಯ ಕರ್ತವ್ಯವನ್ನು (ಸೆಕ್ಯೂರಿಟಿ ಡ್ಯೂಟಿ) ನಿರ್ವಹಿಸಲು ಅವರಿಗೆ ಸೌಭಾಗ್ಯ ಲಭಿಸಿತ್ತು. ಸದರ್ ಅಂಜುಮನ್ ಅಹ್ಮದಿಯಾದ ಅನೇಕ ಆಫೀಸುಗಳಲ್ಲಿ ವಿವಿಧ ಸೇವೆಗಳನ್ನು ಮಾಡಲು ಅವರಿಗೆ ಸೌಭಾಗ್ಯ ಲಭಿಸಿತ್ತು. 1955, 1956ರಲ್ಲಿ ಜಮಾಅತಿಗೆ ಆರ್ಥಿಕ ಕೊರತೆಯಿತ್ತು. ದರ್‌ವೇಶ್‌ಗಳು ಏನಾದರೂ ನೌಕರಿ ಮಾಡಿಕೊಂಡು ಆದಾಯ ಉಂಟುಮಾಡಬಹುದಾಗಿದೆ ಮತ್ತು ಅವರು ಸ್ವತಃ ಯಾವುದಾದರೂ ಕೆಲಸವನ್ನು ಹುಡುಕಬೇಕಾಗಿದೆ ಏಕೆಂದರೆ ಜಮಾಅತಿಗೆ ಅಲೌನ್ಸ್ ನೀಡಲು

ಮತ್ತು ಅವರ ಆರ್ಥಿಕ ಭಾರವನ್ನು ಎತ್ತಲು ಈಗ ಸಾಧ್ಯವಲ್ಲವೆಂದು ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್ ಘೋಷಿಸಿತು. ಈ ನಿರ್ದೇಶನದ ಬೆಳಕಿನಲ್ಲಿ ಅವರು ದಾರುಲ್ ಮಸೀಹಿನ ಹೊರಗೆ ಒಂದು ಚಹಾ ಅಂಗಡಿಯನ್ನು ತೆರೆದರು. ಅಲ್ಲಿ ಅವರು ಹೆಚ್ಚಾಗಿ ಅತಿಥಿಗಳಿಗೆ ಮತ್ತು ಬಡ ಜನರಿಗೆ ಉಚಿತವಾಗಿ ಚಹಾ ನೀಡುತ್ತಿದ್ದರು.

ವಿವಾಹ ವಿಚ್ಛೇದಿತರಾದ ಕೇರಳದ ಒಬ್ಬರು ಮಹಿಳೆ ಆಮಿನ ಸಾಹಿಬರೊಡನೆ ಅವರ ವಿವಾಹ ಆಗಿತ್ತು. ಆಮಿನ ಸಾಹಿಬರಿಗೆ ಮೊದಲೇ ಒಬ್ಬಳು ಮಗಳಿದ್ದಳು. ಅವಳನ್ನು ತಯ್ಯಿಬ್ ಸಾಹಿಬ್‌ರು ಸಾಕಿ ಸಲಹಿದರು. ಕೆಲವು ವರ್ಷಗಳ ಹಿಂದೆ ಅವರಿಗೆ ತೀವ್ರ ಮೊಣಕಾಲು ನೋವಿತ್ತು. ಇದರಿಂದ ಅವರಿಗೆ ನಡೆದಾಡಲು ಕಷ್ಟವಾಗುತ್ತಿತ್ತು. ಆಪರೇಶನ್ ಮಾಡಬೇಕೆಂದು ವೈದ್ಯರು ಸಲಹೆ ನೀಡಿದರು. ಆದರೆ ಅವರು ಒಪ್ಪಲಿಲ್ಲ. ಅವರು ಬಹಳ ಮರುಕದಿಂದ ಮತ್ತು ಬಹಳ ಆರ್ದ್ರತೆ ಮತ್ತು ನೋವಿನಿಂದ ದುಆ ಮಾಡುತ್ತಿದ್ದರು. ಅವರು ಹೇಳುತ್ತಾರೆ: ಒಂದು ರಾತ್ರಿ ನಾನು ಕನಸಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರನ್ನು ಕಂಡೆ. ಅವರು ಬಂದು ನನಗೆ **ಬಿಹಿಶ್ತಿ ಮಖ್‌ಬರದ** ಕೆಲವು ಗಿಡಮೂಲಿಕೆಗಳನ್ನು ತಿನ್ನಲು ಕೊಟ್ಟರು. ಅನಂತರ ಮೊಣಕಾಲಿನ ನೋವು ಮೆಲ್ಲ ಮೆಲ್ಲನೆ ಕೊನೆಗೊಂಡಿತು ಮತ್ತು ತನ್ನ ಅಭಿಲಾಷೆಯಂತೆ ಅವರು ಪುನಃ ನಿಯತವಾಗಿ ನಮಾಝಿಗಾಗಿ ಮಸ್ಜಿದ್ ಅಖ್ಸಾ ಮತ್ತು ಮಸ್ಜಿದ್ ಮುಬಾರಕಿಗೆ ಬರಲು ತೊಡಗಿದರು. ಅವರಿಗೆ ಖಿಲಾಫತಿನೊಂದಿಗೆ ಅಪರಿಮಿತ ಸಂಬಂಧ ಮತ್ತು ಪ್ರೀತಿಯಿತ್ತು. ಅವರಿಗೆ ಕ್ರೀಡಾಟದಲ್ಲಿ ಅಭಿರುಚಿಯಿತ್ತು. ಆದ್ದರಿಂದ ಯುವಕರಿಗೂ ಅವರೊಂದಿಗೆ ವಿಶೇಷ ಸಂಬಂಧವಿತ್ತು. ಆಟದ ಮೈದಾನಗಳಲ್ಲಿ ಯುವಕರನ್ನು ಹುರಿದುಂಬಿಸಲು ಬರುತ್ತಿದ್ದರು. ಈ ರೀತಿಯಾಗಿ ಯುವಕರ ಧಾರ್ಮಿಕ ತರಬೇತಿ ಕೂಡ ಆಗುತ್ತಿತ್ತು.

ಹಝ್ರತ್ ಮುಸ್ಲಿಹ್ ಮೌಊದ್(ರ)ರ ನಿರ್ದೇಶನ ಪ್ರಕಾರ ಭಾರತ ವಿಭಜನೆಯ ಸಮಯದಲ್ಲಿ 313 ದರವೇಶುಗಳು ಖಾದಿಯಾನಿನಲ್ಲಿ ನೆಲೆಸಿದ್ದರು. ನಿಧನಗೊಂಡ ದರ್‌ವೇಶ್‌ಗಳಲ್ಲಿ ಇವರು ಕೊನೆಯ ದರ್‌ವೇಶ್ ಆಗಿದ್ದರು. ಈಗ ಖಾದಿಯಾನಿನಲ್ಲಿ ಯಾರೂ ದರ್‌ವೇಶ್ ಉಳಿದಿಲ್ಲ. ಖಾದಿಯಾನಿನಲ್ಲಿ ಇಂದು ಆರಂಭಿಸಿದ್ದು ದರ್‌ವೇಶ್‌ಗಳಿಲ್ಲದ ಮೊದಲ ಜಲ್ಸ ಆಗಿದೆ. ತ್ಯಾಗಶೀಲರಾದ ಈ ಹಿರಿಯರ ರೂಢಿಗಳನ್ನು ನೆಲೆನಿಲ್ಲಿಸುತ್ತಾ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಖಾದಿಯಾನಿನಲ್ಲಿ ತಮ್ಮ ಜೀವಿತವನ್ನು ಸಾಗಿಸುವುದು ಖಾದಿಯಾನಿನಲ್ಲಿ ನೆಲೆಸಿರುವ ಹೊಸ ಪೀಳಿಗೆಯ ಕೆಲಸವಾಗಿದೆ. ಅಲ್ಲಾಹನು ಅವರಿಗೆ ಅದರ ಸೌಭಾಗ್ಯ ನೀಡಲಿ.

(ಅದೇ ರೀತಿಯಲ್ಲಿ ಪಾಕಿಸ್ತಾನದ ರಬ್ವದ ಸದರ್ ಅಂಜುಮನ್ ಅಹ್ಮದಿಯಾದ ಸದರ್ ಆಗಿದ್ದ ಮಿರ್ಝಾ ಮುಹಮ್ಮದುದ್ದೀನ್ ನಾಝ್ ಸಾಹಿಬ್ ಮತ್ತು ತುರ್ಕಿಮಾನಿಸ್ತಾನ್ ಜಮಾಅತಿನ ಸದರ್ ಆಗಿದ್ದ ಸನ್ಮಾನ್ಯ ಅಕ್ಮೂರಾತ್ ಖಾಕೀಯಿಫ್ ಸಾಹಿಬ್‌ರ ಕುರಿತು ಹುಝೂರ್ ವಿವರಿಸಿದರು ಮತ್ತು ಮೂವರು ದಿವಂಗತರ ಜನಾಝ ಗ಼ಾಯಿಬ್ ನಿರ್ವಹಿಸುವುದಾಗಿ ಹೇಳಿದರು. ದಿವಂಗತರ ಮಗ್ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ಹುಝೂರ್ ದುಆ ಮಾಡಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis****(atba)*

At, ***'Masjid Mubarak',*** *Islamabad, Tilford,* U.K. On 27-12-2024

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email****: khutuba.kannada@gmail.com*

**You can find all the Sermons archived at**: www.alislam.org/friday-sermon